

ಚಿತ್ರಕೃಪೆ: ಸತೀಶ್ ಪಾಕಣೇಕರ್

ಜಲಂಧರ್‌ನಲ್ಲಿ ಭಕ್ತ ಮಂಗತ್‌ರಾಮ್ ಬಳಿ ಧ್ರುಪದ್ ಕಲಿಯಲಾರಂಭಿಸಿದರು. ಜಲಂಧರಿನ ಪ್ರಖ್ಯಾತ ಹರಿವಲ್ಲಭ ಸಮಾರೋಹದಲ್ಲಿ ವಿನಾಯಕರಾವ್ ಪಟವರ್ಧನ್ ಅವರ ಭೇಟಿಯಾಯಿತು. ಅವರು ಗದಗದ ಸಮೀಪದ ಕುಂದಗೋಳದಲ್ಲಿದ್ದ ಉಸ್ತಾದ್ ಕರೀಂಖಾನ್ ಸಾಹೇಬರ ಶಿಷ್ಯ ಸವಾಯಿ ಗಂಧರ್ವರ ಬಳಿಗೆ ಜೋಶಿಯವರನ್ನು ಕಳಿಸಿದರು. "ನಾನು ಗುರುಗಳ ಮನೆಯಲ್ಲಿಯೇ ಐದು ವರ್ಷಗಳಿದ್ದೆ. ಅವರು ಹಣ ತೆಗೆದುಕೊಳ್ಳಲಿಲ್ಲ. ಅವರ ಸೇವೆ ಮಾಡುತ್ತಿದ್ದೆ. ಶಾಲಾಕಾಲೇಜುಗಳಲ್ಲಿ ಕಲಾವಿದರು ಹುಟ್ಟಿಕೊಳ್ಳುವುದಿಲ್ಲ. ಕಲಾವಿದ ಹುಟ್ಟಬೇಕಾದರೆ ಹಗಲೂ ರಾತ್ರಿ ಗುರುವಿನ ಸಾಂಗತ್ಯದಲ್ಲಿ ಇರಬೇಕು. ಒಂದು ವಿಶ್ವಾಸವಿರಬೇಕು. ಅದು ಎಲ್ಲದಕ್ಕಿಂತ ದೊಡ್ಡ ವಸ್ತು. ಪ್ರತಿಯೊಬ್ಬ ಕಲಾವಿದನಿಗೂ ನಿಜವಾದ ಪ್ರಶಸ್ತಿ ಎಂದರೆ ಗುರುಕೃಪೆ ಮತ್ತು ಕಂಠ. ರಾಗಗಳನ್ನು ನಮ್ಮದು ಮಾಡಿಕೊಳ್ಳಬೇಕಾದರೆ ಮೊದಲು ಗುರು ಸಿಗಬೇಕು."

ಜೋಶಿಯವರ ಕಲಿಯುವ ದಾಹಕ್ಕೆ ಕೊನೆಯೇ ಇರಲಿಲ್ಲ. ರಾಂಪುರದಲ್ಲಿ ಉಸ್ತಾದ್ ಮುಷ್ತಾಕ್ ಹುಸೇನ್‌ಜೀ ಅವರ ಬಳಿ ಒಂದು ವರ್ಷ ಕಲಿತರು. ಠುಮ್ರಿ ಕೇಳುವ ಮತ್ತು ಕಲಿಯುವ ಉದ್ದೇಶದಿಂದಲೇ ಲಕ್ನೋಗೆ ಬಂದರು. ಬೇಗಂ ಅಖ್ತರ್, ರಸೂಲನ್ ಬಾಯಿ, ಮತ್ತು ಸಿದ್ಧೇಶ್ವರಿ ದೇವಿ ಅವರ ಠುಮ್ರಿ ಗಾಯನ ಕೇಳಿದರು. ಬೇಗಂ ಅಖ್ತರ್ ಅವರ ಶಿಫಾರಸ್ಸಿನ ಮೇರೆಗೆ ಅಲ್ಲಿನ ಆಕಾಶವಾಣಿಯ ನಿಲಯದ ಕಲಾವಿದರೂ ಆಗಿದ್ದರು. ಅವರ ಠುಮ್ರಿಗಾಯನದಲ್ಲಿ ಲಖನೌದ ಪ್ರಭಾವ ತುಂಬಾ ಗಾಢವಾಗಿದೆ.

ಜೋಶಿಯವರ ತಾನ್ ಅತ್ಯಂತ ವಿಶೇಷ. ಅದರ ಹಿಂದೆ ಒಂದು ರೀತಿಯ ಗೂಂಜ್ ಇರುತ್ತದೆ. ಅವರ ತಾನ್ ತ್ರಿಸ್ಥಾಯಿಯಲ್ಲಿ ನಿರಾಯಾಸವಾಗಿ ಸಂಚರಿಸುತ್ತದೆ. ಅದು ತುಂಬಾ ಅಪರೂಪ. ಜೋಶಿ ಹೇಳುತ್ತಾರೆ, "ನನ್ನ ಗಾಯನ ಮತ್ತು ನನ್ನ ಪ್ರತಿಯೊಂದು ತಾನ್ ಮೇಲೆ ಕೇಸರಬಾಯಿಯ ಪ್ರಭಾವವಿದೆ. ಅದರಿಂದ ನನ್ನ ತಾನ್ ಹೀಗೆ ಬರುತ್ತದೆ. ಅದು ನನ್ನ ಅದೃಷ್ಟ. ಬಡೇ ಗುಲಾಂ ಅಲಿ ಖಾನ್, ಅಮೀರ್ ಖಾನ್, ಕೇಸರಬಾಯಿ ಕೇರ್ಕರ್ ಮುಂತಾದ ಎಲ್ಲಾ ಘರಾನೆಯ ಅತ್ಯಂತ ಒಳ್ಳೆಯ ಗಾಯಕರ ಸಂಗೀತ ಕೇಳಿದ್ದೇನೆ. ಭಾರತೀಯ ಸಂಗೀತದಲ್ಲಿ ಎಷ್ಟು ಘರಾನೆಗಳಿವೆಯೋ ಅವುಗಳಲ್ಲಿನ ಅತ್ಯುತ್ತಮ ಅಂಶಗಳೆಲ್ಲವನ್ನೂ ಮೇಳೈಸಿ ಜನಗಳ ಮುಂದಿಡಬೇಕೆಂಬುದು ನನ್ನ ಆಸೆ. ಒಬ್ಬ ಒಳ್ಳೆಯ ಕಲಾವಿದನಾಗಲು ನಮ್ಮದೊಂದು ಅಸ್ಮಿತೆಯನ್ನು ರೂಪಿಸಿಕೊಳ್ಳುವುದು ತುಂಬಾ ಮುಖ್ಯ. ಒಬ್ಬ ಒಳ್ಳೆಯ ಕಲಾವಿದ ಒಬ್ಬ ಚೋರ. ಗುರುಗಳ ಸಂಗೀತಕ್ಕೆ ಇತರ ಒಳ್ಳೆಯ ಸಂಗೀತದಿಂದ ಒಂದಿಷ್ಟನ್ನು ಸೇರಿಸಿಕೊಳ್ಳಬೇಕು. ನಮ್ಮ ಸ್ವಂತ ಕಲ್ಪನೆಯೂ ಅದಕ್ಕೆ ಸೇರಬೇಕು. ಗುರುವನ್ನು ಸಾರಾಸಗಟಾಗಿ ನಕಲು ಮಾಡುವುದು ಸುಲಭ. ಆದರೆ ನನ್ನ ಗಾಯನ ನನ್ನ ವ್ಯಕ್ತಿತ್ವದ ಅಭಿವ್ಯಕ್ತಿ ಮತ್ತು ನನ್ನ ಅಸ್ಮಿತೆ ಆಗಿರಬೇಕು. ನಾನು ನನ್ನ ಶಿಷ್ಯರಿಗೆ ಹೇಳುವುದು: ನನ್ನಂತೆ ಹಾಡದೆ ನಿಮ್ಮ ಶೈಲಿಯಲ್ಲಿ ಹಾಡಿ. ನಿಮ್ಮ ಕಂಠದ ಮನೋಧರ್ಮ ಏನಿದೆಯೋ ಆ ರೀತಿ ಹಾಡಿ. ಆಗಷ್ಟೇ ಸಂಗೀತ ಮುಂದುವರಿಯುತ್ತದೆ ಮತ್ತು ಅದು ಸಮೃದ್ಧವಾಗಿರುತ್ತದೆ."